# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಗ್ರಾಮ ಸ್ವರಾಜ್ - ಕರ್ನಾಟಕ ಪಂಚಾಯತ್ ರಾಜ್ ಸಂಸ್ಥೆಗಳ ಸಬಲೀಕರಣ ಯೋಜನೆ 2ನೇ ಹಂತ-ವಿಶ್ವ ಬ್ಯಾಂಕ್ ಮುಖಾಂತರ ಐ.ಬಿ.ಆರ್.ಡಿ. ಆರ್ಥಿಕ ನೆರವು **(ಪರಿಷ್ಕೃತ)**-ಕುರಿತು.

**ಓದಲಾಗಿದೆ:**

i. ದಿನಾಂಕ: 13-06-2014 ರಂದು ಸಚಿವ ಸಂಪುಟದ ಅನುಮೋದನೆಯಾಗಿರುವ ಟಿಪ್ಪಣಿ ಸಂಖ್ಯೆ:

ii. 11ನೇ ಅನುಷ್ಠಾನ ಅಭಿಯಾನ 2014 ರ ಮಾರ್ಚ್ 17-21 ರಲ್ಲಿ ಸಲ್ಲಿಸಿರುವ ಶಿಫಾರಸ್ಸಿನ ವರದಿ.

iii. 40ನೇ ಶೋಧನಾ ಸಮಿತಿಯು ದಿನಾಂಕ: 28-02-2014 ರಂದು ಭಾರತ ಸರ್ಕಾರದ ಆರ್ಥಿಕ ವ್ಯವಹಾರಗಳ ಇಲಾಖೆ ಮತ್ತು ಆರ್ಥಿಕ ಮಂತ್ರಾಲಯ ನಡೆಸಿದ ಸಭಾ ನಡವಳಿಕೆ.

iv. ವಿಶ್ವಬ್ಯಾಂಕ್‌ನಲ್ಲಿನ ಭಾರತದ ಪರ ನಿರ್ದೇಶಕರ ಪತ್ರ ದಿನಾಂಕ: 07-11-2014.

v. ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಎಫ್‌ಡಿ 08 ಪಿಎಂಯು 2014 (ಭಾಗ-1), ದಿನಾಂಕ:20-07-2016

vi. ಆರ್ಥಿಕ ಇಲಾಖೆಯ ಪತ್ರ ಸಂಖ್ಯೆ: ಎಫ್‌ಡಿ 08 ಪಿಎಂಯು 2014 (ಭಾಗ-1), ದಿನಾಂಕ:16-12-2016

vii. ಟಿಪ್ಪಣಿ, ಕಡತದ ಸಂಖ್ಯೆ 81(1) ಎಫ್‌ಡಿ439 ವೆಚ್ಚ-6/2013/ಗ್ರಾಅಪಂ/541/2016, ದಿನಾಂಕ 17-12-2016

viii. ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪಂ.81(1) ಗ್ರಾಸ್ವಯೋ.2013, ಬೆಂಗಳೂರು, ದಿನಾಂಕ 10-8-2016.

**ಪ್ರಸ್ತಾವನೆ:**

ರಾಜ್ಯದಲ್ಲಿನ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ಡಾ॥ ಡಿ.ಎಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಉನ್ನತ ಮಟ್ಟದ ಸಮಿತಿಯು ಗುರುತಿಸಿದ್ದ ಅತಿ ಹಿಂದುಳಿದ ತಾಲ್ಲೂಕುಗಳಲ್ಲಿ ಗ್ರಾಮ ಸ್ವರಾಜ್ ಮೊದಲನೇ ಹಂತದಲ್ಲಿ ಅಭಿವೃದ್ಧಿಪಡಿಸಿದ್ದ ಸಾಧನೆ ಹಾಗೂ ಇದರಿಂದ ಉಂಟಾದ ಧನಾತ್ಮಕ ಬದಲಾವಣೆಯ ಫಲಿತಾಂಶದಿಂದಾಗಿ, 39 ಅತ್ಯಂತ ಹಿಂದುಳಿದ ಹಾಗೂ 40 ಅತಿ ಹಿಂದುಳಿದ ತಾಲ್ಲೂಕುಗಳನ್ನು ಅಭಿವೃದ್ಧಿಪಡಿಸಲು ಗ್ರಾಮ ಸ್ವರಾಜ್ 2ನೇ ಹಂತದ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಗ್ರಾಮ ಪಂಚಾಯಿತಿಗಳು ತಮ್ಮ ಸಂಪನ್ಮೂಲವನ್ನು ವೃದ್ಧಿಸಿಕೊಳ್ಳುವುದು, ಅವುಗಳಿಗೆ ಲಭ್ಯವಾಗುವ ಒಟ್ಟಾರೆ ಅನುದಾನದಿಂದ ಅವುಗಳ ಸಾಮರ್ಥ್ಯವನ್ನು ಗರಿಷ್ಠವಾಗಿ ಉಪಯೋಗಿಸಿಕೊಳ್ಳುವ ಮೂಲಕ ಸ್ಥಳೀಯರಿಗೆ ಎಲ್ಲಾ ಸೇವೆಗಳನ್ನು ಒದಗಿಸುವುದು, ಗ್ರಾಮ ಪಂಚಾಯಿತಿಗಳನ್ನು ಸದೃಢಗೊಳಿಸುವುದೇ ಗ್ರಾಮ ಸ್ವರಾಜ್ 2ನೇ ಹಂತದ ಮೂಲ ಉದ್ದೇಶವಾಗಿದೆ. ಯೋಜನೆಯ ವ್ಯಾಪ್ತಿಯನ್ನು ಕೇವಲ ಗ್ರಾಮ ಪಂಚಾಯಿತಿ ಹಂತಕ್ಕೆ ನಿಶ್ಚಯಗೊಳಿಸದೆ, ತಾಲ್ಲೂಕಿನ ಹೋಬಳಿ ಮಟ್ಟಕ್ಕೆ ಗುಂಪುಗಳನ್ನಾಗಿ ವಿಂಗಡಿಸುವುದು ಹಾಗೂ ಪ್ರತಿ ಹೋಬಳಿ ಹಂತದಲ್ಲಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದನ್ನು ಪರೀಶಿಲನೆ, ಮೇಲ್ವಿಚಾರಣೆ ಹಾಗೂ ಉಸ್ತುವಾರಿ ನಿರ್ವಹಿಸಲು ಗ್ರಾಮ ಪಂಚಾಯತಿ ಹಾಗೂ ತಾಲ್ಲೂಕುಗಳ ನಡುವೆ ಸಂಪರ್ಕ ಕಲ್ಪಿಸುವ ಕೊಂಡಿಯಾಗಿ ಕಾರ್ಯನಿರ್ವಹಿಸುವುದು. ಗ್ರಾಮ ಪಂಚಾಯಿತಿಗಳು ಅವುಗಳ ಅವಶ್ಯಕತೆಗಳನ್ನು ಪೂರೈಸಲು ಯೋಜನಾ ಮೊತ್ತದ ಶೇ. 88 ರಷ್ಟರ ಮೊತ್ತ (ರೂ. 1765.50 ಕೋಟಿ) ವನ್ನು ರಾಜ್ಯದ 2790 ಗ್ರಾಮ ಪಂಚಾಯಿತಿಗಳಿಗೆ (39 ಅತ್ಯಂತ ಹಿಂದುಳಿದ ತಾಲ್ಲೂಕುಗಳ 1465 ಗ್ರಾಮ ಪಂಚಾಯಿತಿ ಮತ್ತು ಅತಿ ಹಿಂದುಳಿದ 40 ತಾಲ್ಲೂಕುಗಳ 1325 ಗ್ರಾಮ ಪಂಚಾಯಿತಿಗಳು) ಆಸ್ತಿಗಳನ್ನು ಸೃಜಿಸಲು ಮತ್ತು ಉಳಿದ ಮೊತ್ತ (ರೂ.234.50 ಕೋಟಿ) ವನ್ನು ರಾಜ್ಯದ ಎಲ್ಲಾ ಪಂಚಯತ್ ರಾಜ್ ಸಂಸ್ಥೆಗಳ ಸಾಮರ್ಥ್ಯಾಭಿವೃದ್ಧಿ, ಕಛೇರಿ ಸಿಬ್ಬಂದಿ ವರ್ಗವನ್ನು ಬಲಪಡಿಸುವುದು, ತರಬೇತಿ ಕಾರ್ಯಕ್ರಮಗಳನ್ನು ಹೆಚ್ಚಿಸುವುದು, ರಾಜ್ಯ ಮಟ್ಟದ ಸಂಸ್ಥೆಗಳನ್ನು ಸದೃಢಗೊಳಿಸುವುದು ಹಾಗೂ ಯೋಜನೆಯ ಅನುಷ್ಠಾನದ

ಉಸ್ತುವಾರಿಗಾಗಿ ಉಪಯೋಗಿಸಿಕೊಳ್ಳಲಾಗುವುದು. ಈ ಯೋಜನೆಯ ಅನುಷ್ಠಾನದ ಅವಧಿ ಯೋಜನೆ ಪ್ರಾರಂಭದಿಂದ 6–8 ವರ್ಷಗಳಾಗಿರುತ್ತದೆ.

ಗ್ರಾಮ ಪಂಚಾಯಿತಿಗಳಿಗೆ ಸಾಲದ ರೂಪದಲ್ಲಿ ವರ್ಗಾಯಿಸುವ ನಿಧಿಯು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 214 ರಡಿಯಲ್ಲಿ, ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಕಾಯ್ದೆ ಮತ್ತು ಸಾಲ ಹಿಂಪಡೆಯುವ ಮಾರ್ಗಸೂಚಿಗಳಿಗೆ ಅನುಗುಣವಾಗಿರುತ್ತದೆ. ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸುವ ನಿಧಿಯು ಸಾಲದ ರೂಪದಲ್ಲಿರುತ್ತದೆ. ವಿಶ್ವಬ್ಯಾಂಕ್‌ನ ಸಾಲದ ಪಾಲು ಒಳಗೊಂಡಂತೆ ಒಟ್ಟಾರೆ ರೂ. 1765.50 ಕೋಟಿಗಳ ಮುಕ್ತ ನಿಧಿಯಲ್ಲಿ, ರೂ. 1322.73 ಕೋಟಿ ನಿಧಿ ಮಾತ್ರ ಗ್ರಾಮ ಪಂಚಾಯಿತಿಗಳಿಗೆ ಸಾಲದ ರೂಪದಲ್ಲಿರುತ್ತದೆ ಹಾಗೂ ಇದನ್ನು 6 ವರ್ಷಗಳ ಅವಧಿಯಲ್ಲಿ ನೀಡಲಾಗುತ್ತದೆ. ಈ ಮೊತ್ತವನ್ನು ಗ್ರಾಮ ಪಂಚಾಯಿತಿಗಳು ಅಸಲು ಮತ್ತು 0.25 ಶೇಕಡವಾರು ಬಡ್ಡಿಯನ್ನು ಸೇರಿಸಿ ವಾರ್ಷಿಕವಾಗಿ ಮರುಪಾವತಿಸಬೇಕಾಗಿರುತ್ತದೆ. ಮರುಪಾವತಿ ಅವಧಿಯು 19 ವರ್ಷಗಳಾಗಿದ್ದು ಮತ್ತು ಇಸವಿ 2024 ನಂತರ ಮರುಪಾವತಿ ಪ್ರಾರಂಭವಾಗುತ್ತದೆ. ಗ್ರಾಮ ಪಂಚಾಯಿತಿಗಳು ಸರ್ಕಾರಕ್ಕೆ ಮರುಪಾವತಿಸಬೇಕಾದ ಸಾಲದ ಅಸಲು ಮತ್ತು ಬಡ್ಡಿ ಕಂತುಗಳನ್ನು ಪಾವತಿಸಲು ಉಪೇಕ್ಷಿಸಿದ ಸಂದರ್ಭದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ರ ಪ್ರಕರಣ 301 ಅನ್ವಯಿಸುತ್ತದೆ.

ಈ ಯೋಜನೆಯನ್ನು ರಾಜ್ಯ ಸಚಿವ ಸಂಪುಟವು ಟಿಪ್ಪಣಿ ಸಂಖ್ಯೆ: ಸಿ: 301/2014, ದಿನಾಂಕ: 13.06.2014 ರಂದು ಅನುಮೋದಿಸಿಲಾಗಿದೆ. ಮಾನ್ಯ ಮುಖ್ಯಮಂತ್ರಿಗಳು 2016–17ನೇ ಸಾಲಿನ ಆಯವ್ಯಯ ಭಾಷಣದಲ್ಲಿ ವಿಶ್ವಬ್ಯಾಂಕ್ ನೆರವಿನೊಡನೆ ಗ್ರಾಮ ಸ್ವರಾಜ್ - ಕರ್ನಾಟಕ ಪಂಚಾಯತ್ ರಾಜ್ ಸಂಸ್ಥೆಗಳ ಸಬಲೀಕರಣ ಯೋಜನೆ 2ನೇ ಹಂತವನ್ನು ಅನುಷ್ಠಾನಗೊಳಿಸುವುದಾಗಿ ಘೋಷಿಸಿರುತ್ತಾರೆ. ಸಚಿವ ಸಂಪುಟದ ನಿರ್ಣಯದಂತೆ ಗ್ರಾಮ ಸ್ವರಾಜ್ 2ನೇ ಹಂತದ ಒಟ್ಟಾರೆ ವೆಚ್ಚವನ್ನು ರೂ. 2000.00 ಕೋಟಿಗಳಿಗೆ ನಿಗದಿಗೊಳಿಸಿ ಆರಂಭಿಸಲು ನಿರ್ಧರಿಸಲಾಗಿದೆ. ಇದರಲ್ಲಿ ವಿಶ್ವಬ್ಯಾಂಕಿನ ನೆರವಿನ ಸಾಲದ ಮೊತ್ತ ರೂ. 1400.00 ಕೋಟಿಗಳು ಮತ್ತು ರಾಜ್ಯದ ಪಾಲು ರೂ. 600.00 ಕೋಟಿಗಳಾಗಲಿವೆ. ಅದರಂತೆ, ಆರ್ಥಿಕ ಇಲಾಖೆಯ ಸಹಮತಿಯನ್ನು ಕಡತ ಸಂಖ್ಯೆ: ಎಫ್.ಡಿ 08 ಪಿ.ಎಂ.ಯು 2014 (ಭಾಗ-1) ದಿನಾಂಕ: 20.07.2016 ಮತ್ತು ಎಫ್.ಡಿ. 08 ಪಿ.ಎಂ.ಯು 2014 (ಭಾಗ-1) ದಿನಾಂಕ: 17.12.2016 ರಲ್ಲಿ ಪಡೆದು ಈ ಆದೇಶ ನೀಡಲಾಗಿದೆ.

## <u>ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿಪಿ 81(1) ಜಿಎಸ್‌ಪಿ 2013, ಬೆಂಗಳೂರು</u>
## <u>ದಿನಾಂಕ: 07-01-2017(ಪರಿಷ್ಕೃತ)</u>

ಈ ಮೇಲೆ ವಿವರಿಸಿರುವ ಸಂದರ್ಭಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶವನ್ನು ಜಾರಿಗೊಳಿಸಲು ಹರ್ಷಿಸುತ್ತದೆ:

1. 2016–17 ರಿಂದ 2023–24 ರವರೆಗಿನ ಎಂಟು ವರ್ಷಗಳ ಅವಧಿಯಲ್ಲಿ ವಿಶ್ವಬ್ಯಾಂಕಿನ ಸಾಲದ ಮೊತ್ತ ರೂ. 1400.00 ಕೋಟಿಗಳು ಮತ್ತು ರಾಜ್ಯದ ಪಾಲು ರೂ. 600 ಕೋಟಿಗಳು, ಒಟ್ಟಾರೆ ರೂ. 2000.00 ಕೋಟಿ ಯೋಜನೆಯ ವೆಚ್ಚದೊಂದಿಗೆ ಗ್ರಾಮ ಸ್ವರಾಜ್ - ಕರ್ನಾಟಕ ಪಂಚಾಯಿತ್ ಸಬಲೀಕರಣ 2ನೇ ಹಂತದ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವುದು.
2. ಗ್ರಾಮ ಸ್ವರಾಜ್ ಯೋಜನೆಯ ಮೌಲ್ಯಮಾಪನ ದಾಖಲೆಯಲ್ಲಿ (PAD) ನಿರ್ದಿಷ್ಟಪಡಿಸಿದ ಎಲ್ಲಾ ಷರತ್ತು ಮತ್ತು ನಿಬಂಧನೆಗಳು ಅನ್ವಯವಾಗುತ್ತದೆ.
3. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಒಟ್ಟಾರೆ ಯೋಜನೆಯನ್ನು ಕಾರ್ಯಗತಗೊಳಿಸುವ ವ್ಯವಸ್ಥಾಪಕ ಸಂಸ್ಥೆಯಾಗಿರುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆಯು ಪ್ರತಿಯೊಂದು ಗ್ರಾಮ ಪಂಚಾಯಿತಿಗಳೊಡನೆ ಸಾಲದ ಕರಾರು ಒಪ್ಪಂದ ಮಾಡಿಕೊಳ್ಳಬೇಕಾಗಿದ್ದು ಇದರಲ್ಲಿ ಎಲ್ಲಾ ಸಾಲ ಮರುಪಾವತಿಗಳ ನಿಬಂಧನೆ ಮತ್ತು ವ್ಯವಸ್ಥೆಗಳನ್ನು ಒಳಗೊಂಡಿರುತ್ತದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಾಲ ಮರುಪಾವತಿಗೆ ವಿಧಾನಗಳನ್ನು ರೂಪಿಸುವ ಮತ್ತು ಗ್ರಾಮ ಪಂಚಾಯಿತಿಗಳಿಂದ ರಾಜ್ಯ ಮಟ್ಟದಲ್ಲಿ ಪ್ರತ್ಯೇಕ ಲೆಕ್ಕ ಶೀರ್ಷಿಕೆಯನ್ನು ಸೃಷ್ಟಿಸುವ ಜವಾಬ್ದಾರಿಯನ್ನು ಹೊಂದಿರುತ್ತದೆ.
4. ರಾಜ್ಯ ಮಟ್ಟದಲ್ಲಿ ಗ್ರಾಮ ಸ್ವರಾಜ್ ಒಂದನೇ ಹಂತದ ಯೋಜನೆಯಲ್ಲಿ ಸ್ಥಾಪಿತಗೊಂಡಿರುವ ***ಯೋಜನಾ ವ್ಯವಸ್ಥಾಪಕ ಘಟಕವು*** (PMU) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆಯಲ್ಲಿ

ಮುಂದುವರೆಯುವುದು ಹಾಗೂ ದಿನನಿತ್ಯದ ಯೋಜನೆಯ ನಿರ್ವಹಣೆಯೊಂದಿಗೆ ಒಟ್ಟಾರೆ ಯೋಜನೆಯನ್ನು ಕಾರ್ಯಗತಗೊಳಿಸುವ ಮತ್ತು ಹಣಕಾಸಿನ ನಿರ್ವಹಣೆ, ಗ್ರಾಮ ಪಂಚಾಯಿತಿಗಳಿಂದ ಸಾಲ ವಸೂಲಾತಿ ಮತ್ತು ಸಾಲಕ್ಕೆ ಸಂಬಂಧಿಸಿದಂತೆ ಲೆಕ್ಕ ನಿರ್ವಹಣೆ ಜವಾಬ್ದಾರಿಯನ್ನು ಯೋಜನಾ ವ್ಯವಸ್ಥಾಪಕ ಘಟಕವು ಹೊಂದಿರುತ್ತದೆ.

5. ರಾಜ್ಯ ಮಟ್ಟದಲ್ಲಿ ಒಂದನೇ ಹಂತದ ಯೋಜನೆಯಲ್ಲಿ ಸ್ಥಾಪಿತಗೊಂಡಿರುವ ***ವಿಕೇಂದ್ರೀಕರಣ ವಿಶ್ಲೇಷಣಾ ಕೋಶವು*** (DAC) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆಯಲ್ಲಿ ಮುಂದುವರೆಯುವುದು ಹಾಗೂ ಮೂಲಭೂತ ವಿಶ್ಲೇಷಣೆ, ಮೌಲ್ಯಮಾಪನಾ, ಗ್ರಾಮ ಪಂಚಾಯಿತಿಗಳಿಗೆ ಹಣಕಾಸು ಹರಿವಿನ ಉಸ್ತುವಾರಿ, ಸ್ವಂತ ಸಂಪನ್ಮೂಲ, ಸೇವಾ ವಿತರಣೆ ಮತ್ತು ಅಂತರಸರ್ಕಾರದ ವಿತ್ತೀಯ ವ್ಯವಸ್ಥೆ ಮತ್ತು ಇತರೆ ಸಾಮಾಜಿಕ-ಆರ್ಥಿಕ ದತ್ತಾಂಶಗಳ ಜಾಡಿಕರಣ ಜವಬ್ದಾರಿಗಳೊಂದಿಗೆ ಯೋಜನೆಯ ಉದ್ದೇಶಗಳ ಸಫಲತೆ ಮತ್ತು ಉತ್ತಮ ಸಾಧನೆಗಳಿಗಾಗಿ ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸುವ ಸಾಲ ನಿಧಿಯ ಮೌಲ್ಯಮಾಪನ, ಸೂತ್ರಾಧಾರಿತ ವಿಶ್ಲೇಷಣೆ ಮತ್ತು ಪ್ರಸ್ತಾಪನೆಯ ಹೊಂದಾಣಿಕೆ ಪ್ರಸ್ತಾಪಿಸಿವ ಮೂಲಕ ಗ್ರಾಮ ಪಂಚಾಯಿತಿಗಳಿಗೆ ಬೆಂಬಲ ನೀಡುವುದು.
6. ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆ ಮಾಡಲು ಆಯವ್ಯದಲ್ಲಿನ ಪ್ರಮಾಣದ ನಿಧಿಯನ್ನು ಯೋಜನೆಯ ಬ್ಯಾಂಕ್ ಖಾತೆಯಿಂದ ಗ್ರಾಮ ಪಂಚಾಯಿತಿಯ ನಿರ್ಧಿಷ್ಟ ಬ್ಯಾಂಕ್ ಖಾತೆಗೆ ವರ್ಗಾಯಿಸಲಾಗುವುದು.
7. ಗ್ರಾಮ ಪಂಚಾಯಿತಿಗಳಿಗೆ ಸಾಲದ ರೂಪದಲ್ಲಿ ವರ್ಗಾಯಿಸುವ ನಿಧಿಯು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಪ್ರಕರಣ 214 ರ ಅಡಿಯಲ್ಲಿ ಹಾಗೂ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಕಾಯ್ದೆ ಮತ್ತು ಸಾಲ ಹಿಂಪಡೆಯುವ ಮಾರ್ಗಸೂಚಿಗಳಿಗೆ ಅನುಗುಣವಾಗಿರುತ್ತದೆ.
8. ಸಾಲ ಮರುಪಾವತಿಯು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993 ಪ್ರಕರಣ 214 ರ ಅನುಗುಣವಾಗಿದ್ದು, ಅದರ ನಿಯಮ 97 ಸಾಲ ತೀರುವಳಿ ನಿಧಿ ರೂಪದಲ್ಲಿ (Sinking Fund) ನಿಗದಿ ಪಡಿಸಿದ ನಮೂನೆಯಲ್ಲಿರುತ್ತದೆ.
9. ಗ್ರಾಮ ಪಂಚಾಯಿತಿಗಳು ಸರ್ಕಾರಕ್ಕೆ ಮರುಪಾವತಿಸಬೇಕಾದ ಸಾಲದ ಅಸಲು ಮತ್ತು ಬಡ್ಡಿ ಕಂತುಗಳನ್ನು ಪಾವತಿಸಲು ವಿಫಲವಾದಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993ರ ಪ್ರಕರಣ 301 ರಂತೆ ಅನುಸರಿಸಬೇಕಾಗುವಂತೆ ಆದೇಶವನ್ನು ನೀಡಬಹುದು.
10. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993, ನಿಯಮ 97 ರಡಿಯಲ್ಲಿ – ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕ (ಆ & ಸಂ.) ನಿಯಮ 2006 ರನ್ವಯ ಗ್ರಾಮ ಪಂಚಾಯಿತಿಗಳು ಸಾಲ ತೀರುವಳಿ ನಿಧಿಯ ರಿಜಿಸ್ಟರ್ ನಮೂನೆ 43 ರ ಪ್ರಕಾರ ನಿರ್ವಹಿಸಬೇಕು.
11. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆ 1993, ನಿಯಮ 96 ರಡಿಯಲ್ಲಿ – ಗ್ರಾಮ ಪಂಚಾಯಿತಿ ಆಯವ್ಯಯ ಮತ್ತು ಲೆಕ್ಕ (ಆ & ಸಂ.) ನಿಯಮ 2006 ರನ್ವಯ ಗ್ರಾಮ ಪಂಚಾಯಿತಿಗಳು ಸಾಲದ ರೀಜಿಸ್ಟರ್‌ನ್ನು ನಮೂನೆ ಸಂಖ್ಯೆ 42 ರ ಪ್ರಕಾರ ನಿರ್ವಹಿಸಬೇಕು.
12. ಯೋಜನೆಯ ಪ್ರಾರಂಭಿಕ ವೆಚ್ಚವನ್ನು ಭರಿಸಲು ವಿಶ್ವಬ್ಯಾಂಕ್ - ಐಬಿಆರ್‌ಡಿ ಯೋಜನೆಡಿಯಲ್ಲಿ ಅನುಮತಿಸಲಾದ ಯೋಜನಾ ನಿಧಿಯಿಂದ ಭರಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಕಡತ ಸಂಖ್ಯೆ: ಎಫ್‌ಡಿ 08 ಪಿಎಂಯು 2014 (ಭಾಗ-1) ದಿನಾಂಕ: 17.12.2016 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

7/1/2017

(ಟಿ.ವಿ.ಅರುಣ್ ಕುಮಾರ್)
ಉಪನಿರ್ದೇಶಕರು
ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿಯನ್ನು:

1. ಮಹಾಲೇಖಪಾಲರು, ಕರ್ನಾಟಕ ವೃತ್ತ, ಬೆಂಗಳೂರು.

2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
3. ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರು, ಕರ್ನಾಟಕ ಸರ್ಕಾರ, ಬೆಂಗಳೂರು.
4. ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ. ಕರ್ನಾಟಕ ಸರ್ಕಾರ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ. ಕರ್ನಾಟಕ ಸರ್ಕಾರ, ಬೆಂಗಳೂರು.
7. ಕಾರ್ಯದರ್ಶಿಗಳು, ಆರ್ಥಿಕ(ಆ&ಸಂ) ಇಲಾಖೆ. ಕರ್ನಾಟಕ ಸರ್ಕಾರ, ಬೆಂಗಳೂರು.
8. ಕಾರ್ಯದರ್ಶಿಗಳು (ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು ಮತ್ತು ಸಭಾಧ್ಯಕ್ಷರು, ಎಸ್.ಎಲ್.ಎಸ್.ಸಿ. ಬೆಂಗಳೂರು.
9. ಎಲ್ಲಾ ನಿರ್ದೇಶಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
10. ಆಪ್ತ ಕಾರ್ಯದರ್ಶಿ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಕಾರ್ಯಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು,
11. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿ, ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.
12. ಮಹಾನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಕರ್ನಾಟಕ ಸರ್ಕಾರ, ಮೈಸೂರು.
13. ಅಪರ ಕಾರ್ಯದರ್ಶಿಗಳು (ವಿತ್ತೀಯ ಸುಧಾರಣೆ) ಯೋ.ಮೆ.ಫ.- ಆರ್ಥಿಕ ಇಲಾಖೆ. ಕರ್ನಾಟಕ ಸರ್ಕಾರ, ಬೆಂಗಳೂರು,
14. ನಿರ್ದೇಶಕರು, ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ, ಕರ್ನಾಟಕ ಸರ್ಕಾರ, ಮೈಸೂರು.
15. ನಿರ್ದೇಶಕರು, ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ. ಕರ್ನಾಟಕ ಸರ್ಕಾರ, ಬೆಂಗಳೂರು,
16. ಸಚಿವ ಸಂಪುಟದ ಶಾಖೆ. (ನಂ.ಸಿ:301/2014, ದಿನಾಂಕ:13-06-2014) ವಿಧಾನಸೌದ, ಕರ್ನಾಟಕ ಸರ್ಕಾರ, ಬೆಂಗಳೂರು.
17. ಜಿಲ್ಲೆಯ ಎಲ್ಲಾ ಜಿಲ್ಲಾಧಿಕಾರಿಗಳು, ಕರ್ನಾಟಕ ಸರ್ಕಾರ,
18. ಮುಖ್ಯಸ್ಥರು, ಗ್ರಾಮ ಸ್ವರಾಜ್ ಯೋಜನೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
19. ಮುಖ್ಯಸ್ಥರು, ವಿಕೇಂದ್ರೀಕರಣ ವಿಶ್ಲೇಶಣಾ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
20. The Country Director, The World Bank, No. 70- Lodi Estate, New Delhi-110003.
21. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.
22. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು. ಪ್ರಕಾಶನಕ್ಕೆ
23. ಹೆಚ್ಚುವರಿ ಪ್ರತಿಗಳು.